# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. ನಂ.6/2019

ಅ.ಸಾ ಃ **1**

ದೋ.ಸಾ ಃ **1**

ದಿನಾಂಕಃ**07/09/2023** ರಂದು ಸಾಕ್ಷಿಯನ್ನು ಮುಂದುವರೆದ ಮುಖ್ಯ ವಿಚಾರಣೆಗಾಗಿ ಪುನಃ ಕರೆಯಿಸಿ ಪ್ರಮಾಣ-ವಚನ ಬೋಧಿಸಲಾಯಿತು.

## ಮುಂದುವರೆದ ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

2. ಆರೋಪಿಯ ಪರಿಚಯ ಇರುವುದಿಲ್ಲ. ಎ.ಸಿ.ಬಿ. ಕಛೇರಿಯಲ್ಲಿ ಮುಂದೇನಾಯಿತು ಅಂತಾ ಹೇಳಲು ಬರುವುದಿಲ್ಲ. ಪ್ರಕರಣದ ಬಗ್ಗೆ ನನಗೇನೂ ಮಾಹಿತಿ ಇರುವುದಿಲ್ಲ.

3. ಈಗ ನೋಡುತ್ತಿರುವ ದಾಖಲೆಯ ಮೇಲಿರುವ ಸಹಿ ನನ್ನದೇ ಇದೆ. ಅದನ್ನು ಏಕೆ ಪಡೆದುಕೊಂಡರು ಗೊತ್ತಿಲ್ಲ. ತಹಶೀಲ್ದಾರ ಕಛೇರಿಯಲ್ಲಿ ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದು ಕೊಂಡರು. ಅದರಲ್ಲಿ ಏನು ಬರೆದುಕೊಂಡರು ಅಂತಾ ಗೊತ್ತಿಲ್ಲ. ಆ ದಾಖಲೆ ದೂರು ಆಗಿದ್ದು, ಅದನ್ನು ನಿಪಿ-1 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು.

4. ಈಗ ತೋರಿಸುತ್ತಿರುವ ಎರಡು ದಾಖಲೆಗಳ ಮೇಲೆ ನನ್ನ ಸಹಿಗಳು ಇವೆ. ಅವುಗಳನ್ನು ಕೂಡ ತಹಶೀಲ್ದಾರ ಕಛೇರಿಯಲ್ಲಿಯೇ ಖಾಲಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆ.. ಆ ದಾಖಲೆಗಳು ವಹಿಸುವಿಕೆ ಪಂಚನಾಮೆ ಮತ್ತು ಜಪ್ತು ಪಂಚನಾಮೆ ಆಗಿವೆ. ಅವುಗಳನ್ನು ನಿಪಿ-2 ಮತ್ತು ನಿಪಿ-3 ಅಂತಾ ಮತ್ತು ಸಾಕ್ಷಿಯು ತನ್ನ ಸಹಿಗಳನ್ನು ಗುರುತಿಸಿದ್ದರಿಂದ, ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಅಂತಾ ಗುರುತಿಸಲಾಯಿತು.

5. ಈಗ ನೋಡುತ್ತಿರುವ ಫೋಟೋಗಳಲ್ಲಿ ನನ್ನ ಇರುವಿಕೆ ಕಂಡು ಬರುತ್ತದೆ. ಅವುಗಳನ್ನು ಎ.ಸಿ.ಬಿ. ಕಛೇರಿಯಲ್ಲಿ ತೆಗೆಯಲಾಗಿದೆ. ಅವುಗಳನ್ನು ಯಾರು ಮತ್ತು ಏಕೆ ತೆಗೆದರು ಅಂತಾ ಗೊತ್ತಿಲ್ಲ. ಸದರಿ ಫೋಟೋಗಳನ್ನು ನಿಪಿ-4 ರಿಂದ ನಿಪಿ-31 ಅಂತಾ ಗುರುತಿಸಲಾಯಿತು.

6. ಈಗ ನೋಡುತ್ತಿರುವ ಇತರೇ ಫೋಟೋಗಳಲ್ಲಿ ಕೂಡ ನನ್ನ ಇರುವಿಕೆ ಕಂಡು ಬರುತ್ತದೆ. ಆ ಫೋಟೋಗಳನ್ನು ತಲಾಠಿ ಕಛೇರಿಯಲ್ಲಿ ತೆಗೆಯಲಾಗಿದೆ. ಸದರಿ ಫೋಟೋಗಳನ್ನು ಕೂಡ ಯಾಕೆ ತೆಗೆದರು ಅಂತಾ ಗೊತ್ತಿಲ್ಲ. ಸದರಿ ಫೋಟೋಗಳನ್ನು ನಿಪಿ-32 ರಿಂದ ನಿಪಿ-53 ಅಂತಾ ಗುರುತಿಸಲಾಯಿತು.

7. ಈಗ ನೋಡುತ್ತಿರುವ ಇನ್ನೊಂದು ದಾಖಲೆಯ ಮೇಲೆ ನನ್ನ ಸಹಿ ಇದೆ. ಅದನ್ನು ತನಿಖಾಧಿಕಾರಿಯವರು ಏಕೆ ಪಡೆದುಕೊಂಡರು ಅಂತಾ ಗೊತ್ತಿಲ್ಲ. ಅದರಲ್ಲಿ ಏನು ಬರೆಯಲಾಗಿದೆ ಅಂತಾ ಗೊತ್ತಿಲ್ಲ. ಸಾಕ್ಷಿಯು ತನ್ನ ಸಹಿ ಗುರುತಿಸಿದ್ದರಿಂದ, ಅದನ್ನು ನಿಪಿ-54 ಅಂತಾ ಮತ್ತು ಸಾಕ್ಷಿಯ ಸಹಿಯನ್ನು ನಿಪಿ-54(ಎ) ಅಂತಾ ಗುರುತಿಸಲಾಯಿತು. ಈಗ ನೋಡುತ್ತಿರುವ ಫೋಟೋಗಳಲ್ಲಿ ಕೂಡ ನನ್ನ ಇರುವಿಕೆ ಕಂಡು ಬರುತ್ತದೆ. ಸದರಿ ಫೋಟೋಗಳನ್ನು ಎಲ್ಲಿ ಮತ್ತು ಏಕೆ ತೆಗೆದರು ಅಂತಾ ಗೊತ್ತಿಲ್ಲ. ಸದರಿ ಫೋಟೋಗಳನ್ನು ನಿಪಿ-55 ರಿಂದ ನಿಪಿ-60 ಅಂತಾ ಗುರುತಿಸಲಾಯಿತು.

8. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನಾಗಲೀ ಅಥವಾ ಮುಂದುವರೆದ ಹೇಳಿಕೆಯನ್ನಾಗಲೀ ಪಡೆದಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ನೀಡಿರುವ ಹೇಳಿಕೆ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಅವು ಪರಸ್ಪರ ವ್ಯತಿರಿಕ್ತವಾಗಿರುವುದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿದ್ದು ಮತ್ತು ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಸರ್ಕಾರಿ ಅಭಿಯೋಜಕರು ಕೋರಿದ್ದರಿಂದ ಅನುಮತಿಸಲಾಗಿದೆ.)

## ಪಾಟೀ ಸವಾಲುಃ ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –

9. ನಮ್ಮ ಮನೆತನದ ಸರ್ವೆ ನಂ.38 ರಲ್ಲಿ 1 ಎಕರೆ 20 ಗುಂಟೆ ಜಮೀನು ಭೂವೀರಾಪುರ ಗ್ರಾಮದಲ್ಲಿ ಇರುತ್ತದೆ. ನಮ್ಮ ತಂದೆ ದಿನಾಂಕಃ27/12/2017 ರಂದು ಕ್ಯಾನ್ಸರ ಖಾಯಿಲೆಯಿಂದ ಮರಣ ಹೊಂದಿದ ನಂತರ, ನಾನು ಮತ್ತು ನಮ್ಮ ತಾಯಿಯವರು ನಮ್ಮ ತಂದೆಯವರ ಹೆಸರನ್ನು ಕಡಿಮೆ ಮಾಡಿ ಸದರಿ ಜಮೀನಿಗೆ ವಾರಸುದಾರರು ಅಂತಾ ನಮ್ಮ ತಾಯಿಯ ಹೆಸರನ್ನು ದಾಖಲು ಮಾಡಿಸುವ ಸಲುವಾಗಿ, ದಿನಾಂಕಃ26/2/2018 ರಂದು ಸದರಿ ಗ್ರಾಮದ ಗ್ರಾಮ-ಲೆಕ್ಕಾಧಿಕಾರಿ ಅಂದರೆ ಆರೋಪಿಯ ಹತ್ತಿರ ಹೋಗಿ ಭೇಟಿಯಾಗಿದ್ದೆವು, ಆ ಕಾಲಕ್ಕೆ ಆರೋಪಿಯು ಮೊದಲು 5,000/- ರೂ. ಲಂಚಕ್ಕೆ ಬೇಡಿಕೆ ಇಟ್ಟು ಮತ್ತು ನಂತರ 3,000/- ರೂ. ಕೊಡುವಂತೆ ತಿಳಿಸಿದ ಅಂದರೆ ಸರಿಯಲ್ಲ. ಆರೋಪಿಯು ಸದರಿ ಮೊತ್ತದ ಹಣ ಬೇಡಿಕೆ ಇಟ್ಟಿದ್ದನ್ನು ನನ್ನ ಮೊಬೈಲನಲ್ಲಿ ರೆಕಾರ್ಡ ಮಾಡಿಕೊಂಡೆ ಅಂದರೆ ಸರಿಯಲ್ಲ.

10. ಸದರಿ ಲಂಚದ ಹಣವನ್ನು ಕೊಡಲು ನನಗೆ ಇಷ್ಟವಿಲ್ಲದ ಕಾರಣ, ನಾನು ಮತ್ತು ನನ್ನ ತಾಯಿ ದಿನಾಂಕಃ27/2/2018 ರಂದು ಎ.ಸಿ.ಬಿ. ಪೊಲೀಸ್ ಠಾಣೆಗೆ ಹೋಗಿ ಸದರಿ ಘಟನೆಯ ಕುರಿತು, ಆರೋಪಿಯು 3 ಸಾವಿರ ರೂಪಾಯಿಗಳ ಲಂಚದ ಬೇಡಿಕೆ ಇಟ್ಟ ಬಗ್ಗೆ ಮತ್ತು ನನ್ನ ಮತ್ತು ಆರೋಪಿಯ ಮಧ್ಯೆ ನಡೆದ ಸಂಭಾಷಣೆಯನ್ನು ನನ್ನ ಮೊಬೈಲನಲ್ಲಿ ರೆಕಾರ್ಡ ಮಾಡಿಕೊಂಡು ಬಂದಿರುವುದಾಗಿ ತಿಳಿಸಿ ಪೊಲೀಸ್ ಇನ್ಸಪೆಕ್ಟರಗೆ ಕೇಳಿಸಿರುತ್ತೇನೆ, ಅದನ್ನು ಕೇಳಿಸಿಕೊಂಡು ಖಾತ್ರಿಪಡಿಸಿಕೊಂಡು ನನ್ನಿಂದ ನಿಪಿ-1 ರಂತೆ ಲಿಖಿತ ದೂರು ಪಡೆದುಕೊಂಡರು ಮತ್ತು ಪ್ರಕರಣವನ್ನು ಅಪರಾಧ ಸಂಖ್ಯೆ 5/2018 ರಂತೆ ದಾಖಲಿಸಿಕೊಂಡರು ಅಂದರೆ ಸರಿಯಲ್ಲ.

11. ನಂತರ ಚಾಸಾ-27/ತನಿಖಾಧಿಕಾರಿಯವರು ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ನನಗೆ ಅವರಿಬ್ಬರನ್ನು ಪರಸ್ಪರ ಪರಿಚಯ ಮಾಡಿಸಿಕೊಟ್ಟರು, ಘಟನೆಯ ಬಗ್ಗೆ ಫಿರ್ಯಾದನ್ನು ಓದಿ ಹೇಳಿ ನಿಪಿ-2 ರಂತೆ ನನ್ನ ಮತ್ತು ನನ್ನ ತಾಯಿ, ಪಂಚರ ಸಮಕ್ಷಮ ವಹಿಸುವಿಕೆ ಪಂಚನಾಮೆ ಜರುಗಿಸಿ ನಡಾವಳಿಗಳನ್ನು ಬರೆದುಕೊಂಡರು ಅಂದರೆ ಸರಿಯಲ್ಲ. ವಹಿಸುವಿಕೆ ಪಂಚನಾಮೆ ಕಾಲಕ್ಕೆ ನಿಪಿ-4 ರಿಂದ 31 ರಂತೆ ಫೋಟೋಗಳನ್ನು ತೆಗೆದರು ಅಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ-27 ರವರು ನನ್ನಿಂದ ಸದರಿ ಪ್ರಕ್ರಿಯೆಗೆ 500/- ರೂಪಾಯಿ ಮುಖಬೆಲೆಯ 6 ನೋಟುಗಳನ್ನು ಅಂದರೆ ಒಟ್ಟು 3,000/- ರೂಪಾಯಿ ಹಣವನ್ನು ಪಡೆದರು, ಅದನ್ನು ಪಂಚರು ಎಣಿಸಿ ಬಿಳಿ ಹಾಳೆಯಲ್ಲಿ ಅವುಗಳ ಮೌಲ್ಯ ಮತ್ತು ನಂಬರುಗಳನ್ನು ಬರೆದುಕೊಂಡರು, ಸದರಿ ನೋಟುಗಳಿಗೆ ಸಿಬ್ಬಂದಿ ಕಡೆಯಿಂದ ಫಿನಾಪ್ತಲಿನ್ ಪೌಡರ ಲೇಪಿಸಿದರು ಮತ್ತು ವಹಿಸುವಿಕೆ ಪಂಚನಾಮೆಯ ನಡಾವಳಿಗಳನ್ನು ನಿಪಿ-2 ರಂತೆ ಜರುಗಿಸಿದರು ಅಂದರೆ ಸರಿಯಲ್ಲ.

12. ನಂತರ ಅದೇ ದಿನ ಚಾಸಾ-27 ರವರ ಸೂಚನೆಯ ಮೇರೆಗೆ ನಾನು, ನನ್ನ ತಾಯಿ, ಚಾಸಾ-2, 3 ಮತ್ತು ಸಿಬ್ಬಂದಿಯವರು ಒಳಗೊಂಡು ಆರೋಪಿ ಇರುವ ಹಾವೇರಿಯ ತಲಾಠಿ ಕಛೇರಿಗೆ ಅಟೋದಲ್ಲಿ ಹೋದೆವು, ಅಲ್ಲಿ ಆರೋಪಿಗೆ ಫೋನ್ ಮುಖಾಂತರ ಸಂಪರ್ಕಿಸಿದಾಗ, ಆತ ಕಛೇರಿಯ ಹತ್ತಿರ ಇರಲು ತಿಳಿಸಿ, ತಾನು ಊಟ ಮಾಡಿಬರುತ್ತೇನೆ ಅಂತಾ ಹೇಳಿದ, ನಂತರ ಆರೋಪಿ ತನ್ನ ಕಛೇರಿಗೆ ಬಂದಿದ್ದು, ಚಾಸಾ-27 ರವರ ವಹಿಸುವಿಕೆ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯ ಮೇರೆಗೆ ನಾನು, ನನ್ನ ತಾಯಿ ಮತ್ತು ಚಾಸಾ-2 ರವರು ಆರೋಪಿಯ ಛೇಂಬರಗೆ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿಕೊಂಡು ಹೊರಟೆವು, ಚಾಸಾ-2 ರವರು ಹೊರಗಡೆ ನಿಂತುಕೊಂಡಿದ್ದು, ನಾನು ಮತ್ತು ನನ್ನ ತಾಯಿ ಒಳಗಡೆ ಹೋಗಿ, ಕೆಲಸದ ಬಗ್ಗೆ ವಿಚಾರಿಸಿದಾಗ, ಆರೋಪಿಯು 3,000/- ರೂ. ಲಂಚಕ್ಕೆ ಬೇಡಿಕೆ ಇಟ್ಟ, ಆಗ ನಾನು ನನ್ನ ಜೇಬಿನಲ್ಲಿದ್ದ ಸದರಿ 3,000/- ರೂ. ಹಣವನ್ನು ತೆಗೆದು ಆರೋಪಿಗೆ ಕೊಟ್ಟೆ, ಆಗ ಆರೋಪಿಯು ತನ್ನ ಎರಡೂ ಕೈಗಳಿಂದ ಸದರಿ ನೋಟುಗಳನ್ನು ಎಣಿಸಿಕೊಂಡು, ತನ್ನ ಕಛೇರಿಗೆ ಹೋಗಿ, ಟೇಬಲ್ ನ ಮೇಲಿರುವ ಹಳೆಬಟ್ಟೆಯ ಕೆಳಗೆ ಇಟ್ಟಿದ್ದು, ನಂತರ ನಾನು ಹೊರಗಡೆ ಬಂದು ಕರ್ಚಿಫನಿಂದ ಮುಖ ಒರೆಸಿಕೊಳ್ಳುವ ಸಂಜ್ಞೆ ಮಾಡಿದೆ, ಆಗ ಚಾಸಾ-27, ಪಂಚರು ಮತ್ತು ಸಿಬ್ಬಂದಿಯವರು ಆರೋಪಿಯ ಕಛೇರಿಯ ಒಳಗೆ ಬಂದು, ಆರೋಪಿಯ ಕೈಗಳನ್ನು ಹಿಡಿದುಕೊಂಡರು, ಆಗ ಸಮಯ 4.15 ನಿಮಿಷ ಆಗಿತ್ತು, ಮತ್ತು ಚಾಸಾ-27 ರವರು ಆರೋಪಿಗೆ ಹಣದ ಬಗ್ಗೆ ಕೇಳಿದಾಗ, ಹಣ ಪಡೆದುಕೊಂಡಿಲ್ಲ ಅಂತಾ ತಿಳಿಸಿದ, ಆಗ ಪಂಚರನ್ನು ಕೇಳುತ್ತಿದ್ದಾಗ, ಆರೋಪಿಯೇ ಟೇಬಲ್ ಮೇಲಿನ ಬಟ್ಟೆ ಕೆಳಗೆ ಹಣ ಇಟ್ಟಿರುವುದಾಗಿ ತಿಳಿಸಿದ, ನಂತರ ಸಿಬ್ಬಂದಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿದರು, ಆರೋಪಿಯ ಎಡಗೈಯನ್ನು ದ್ರಾವಣದಲ್ಲಿ ತೊಳೆದಾಗ, ಅದು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು, ಅದರಂತೆ ಆರೋಪಿಯ ಬಲಗೈಯನ್ನು

ಇನ್ನೊಂದು ಬಟ್ಟಲಿನ ದ್ರಾವಣದಲ್ಲಿ ಅದ್ದಿ ತೊಳೆದಾಗ, ಅದು ಗುಲಾಬಿ ಬಣ್ಣಕ್ಕೆ ತಿರುಗಿತು, ನಂತರ ಆರೋಪಿಯು ಟೇಬಲ್ ಮೇಲಿರುವ ಹಳೆ ಬಟ್ಟೆಯ ಕೆಳಗೆ ಹಣ ಇರುವುದನ್ನು ತೋರಿಸಿದ, ಅದನ್ನು ಪಂಚರ ಸಮಕ್ಷಮ ಚಾಸಾ-27 ರವರು ವಶಪಡಿಸಿಕೊಂಡು ಪರಿಶೀಲಿಸಲಾಗಿ, ಅವು ನಿಪಿ-2 ರ ಕಾಲಕ್ಕೆ ನೀಡಿದ 500/- ರೂಪಾಯಿ ಮುಖಬೆಲೆಯ 6 ನೋಟುಗಳೇ ಆಗಿದ್ದು, ಅವುಗಳನ್ನು ಚಾಸಾ-3 ರವರು ತಾಳೆ ಮಾಡಿ ನೋಡಿದಾಗ, ಒಂದಕ್ಕೊಂದು ತಾಳೆಯಾಗುತ್ತಿದ್ದವು, ಸ್ಯಾಂಪಲ್ ದ್ರಾವಣ, ಸದರಿ ದ್ರಾವಣ ವನ್ನು ಬಾಟಲ್‌ನಲ್ಲಿ ಸಂಗ್ರಹಿಸಿ ಮತ್ತು ಹಣವನ್ನು ಕವರನಲ್ಲಿ ಹಾಕಿ ವಶಕ್ಕೆ ಪಡೆದು ಕೊಂಡರು, ಈ ಟ್ರ್ಯಾಪ್ ಪ್ರಕ್ರಿಯೆಯನ್ನು ನಿಪಿ-3 ರಂತೆ ಜರುಗಿಸಿದರು, ಅದೇ ಕಾಲಕ್ಕೆ ನಿಪಿ-32 ರಿಂದ 53 ರಂತೆ ಫೋಟೋಗಳನ್ನು ತೆಗೆದರು ಅಂದರೆ ಸರಿಯಲ್ಲ. ನಿಪಿ-3 ಸದರಿ ಟ್ರ್ಯಾಪ್ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

13. ಈ ಎಲ್ಲ ನಡಾವಳಿಗಳ ಬಗ್ಗೆ ಮತ್ತು ದೂರು ನೀಡಿದ ಬಗ್ಗೆ, ಆರೋಪಿ ಲಂಚಕ್ಕೆ ಬೇಡಿಕೆಯೊಡ್ಡಿ ಸದರಿ ದಿನದಂದು ಟ್ರ್ಯಾಪ್ ಕಾಲಕ್ಕೆ ಹಣದ ಬೇಡಿಕೆ ಇಟ್ಟು ಪಡೆದುಕೊಂಡ ಬಗ್ಗೆ, ನನ್ನ ಮತ್ತು ಪಂಚರ ಸಮಕ್ಷಮ ನಡಾವಳಿಗಳನ್ನು ಜರುಗಿಸಿದ್ದರೂ ಸಹಿತ, ಈ ಕುರಿತು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಪೊಲೀಸರಲ್ಲಿ ಸದರಿ ಘಟನೆಯ ಕುರಿತು ದೂರಿನಲ್ಲಿ ತಿಳಿಸಿದ ವಿಷಯ ಮತ್ತು ವಹಿಸುವಿಕೆ ಮತ್ತು ಟ್ರ್ಯಾಪ್ ಪಂಚನಾಮೆ ಕಾಲದ ನಡಾವಳಿ ಕುರಿತಾಗಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಮತ್ತು ಸಂಬಂಧಿಸಿದ ಅಧಿಕಾರಿಗಳನ್ನು ಘಟನಾ ಸ್ಥಳಕ್ಕೆ ಬರಮಾಡಿಕೊಂಡಿದ್ದು ಮತ್ತು ತಹಶೀಲ್ದಾರ ಬಾಕಿ ಇದ್ದ ಕೆಲಸ ಮಾಡಿಕೊಡುವುದಾಗಿ ತಿಳಿಸಿದರು ಮತ್ತು ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದರು ಅಂತಾ ಹೇಳಿಕೆ ನೀಡಿರುತ್ತೇನೆ ಮತ್ತು ಈ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಿತ, ನನಗೇನೂ ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಾನು ದಿನಾಂಕ:28/2/2018 ರಂದು ಚಾಸಾ-27 ರವರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-61 ಅಂತಾ ಗುರುತಿಸಲಾಯಿತು.

14. ಪೊಲೀಸರ ಮುಂದೆ ದಿನಾಂಕ:22/3/2018 ರಂದು ನಾನು ನೀಡಿರುವ ಮರು-ಹೇಳಿಕೆಯಲ್ಲಿ, ಪಂಚರ ಸಮಕ್ಷಮ ನನ್ನ ಧ್ವನಿಮುದ್ರಣವನ್ನು ಚಾಸಾ-27 ರವರು ನಿಪಿ-54 ರಂತೆ, ಪಂಚನಾಮೆ ಪ್ರಕ್ರಿಯೆ ಜರುಗಿಸಿ ಪಡೆದುಕೊಂಡರು ಅಂದರೆ ಸರಿಯಲ್ಲ. ಅದೇ ಕಾಲಕ್ಕೆ ನಿಪಿ-55 ರಿಂದ 60 ರಂತೆ ಫೋಟೋಗಳನ್ನು ಕೂಡ ತೆಗೆದರು ಅಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಮರು-ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಮರು-ಹೇಳಿಕೆಯನ್ನು ನಿಪಿ-62 ಅಂತಾ ಗುರುತಿಸಲಾಯಿತು. ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿದ್ದರಿಂದ, ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಯ ಪರಃ ಶ್ರೀ ಎಂ.ಸಿ.ಎಚ್. ವಕೀಲರಿಂದಃ – ಇಲ್ಲ.</u>**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.